ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ-580025

ರಾಜ್ಯ-ರಹಿತ ನ್ಯಾಯಿಕ ವ್ಯವಸ್ಥೆಗಳು
(Non-State Justice Systems)

ಕಿರು ಸಂಶೋಧನಾ ಯೋಜನೆ
(Minor Research Project)
ಯೋಜನೆಯ ಶೀರ್ಷಿಕೆ (Research Topic)

# ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ವಿವಾದ ಪರಿಹಾರ ವಿಧಾನಗಳು.

ವರದಿ ಸಲ್ಲಿಸಿದವರು
ಶಿವಣ್ಣ ನಾಯ್ಕ M.A, LL.M
ಪ್ರಧಾನ ಸಂಶೋಧಕರು,
(Principal Investigator)
ಕಾನೂನು ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಕಾನೂನು ಕಾಲೇಜು,
ರಾಮನಗರ.

ಅಂತಿಮ ವರದಿ ಅರ್ಪಣೆ
ಇವರಿಗೆ
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ – 580025.
2021

# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
## ನವನಗರ, ಹುಬ್ಬಳ್ಳಿ–580025

ರಾಜ್ಯ–ರಹಿತ ನ್ಯಾಯಿಕ ವ್ಯವಸ್ಥೆಗಳು

**(Non-State Justice Systems)**

**ಕಿರು ಸಂಶೋಧನಾ ಯೋಜನೆ**

**(Minor Research Project)**

ಯೋಜನೆಯ ಶೀರ್ಷಿಕೆ **(Research Topic)**

**ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ವಿವಾದ ಪರಿಹಾರ ವಿಧಾನಗಳು.**

**ವರದಿ ಸಲ್ಲಿಸಿದವರು**


ಶಿವಣ್ಣ ನಾಯ್ಕ M.A, LL.M

ಪ್ರಧಾನ ಸಂಶೋಧಕ,

(Principal Investigator)

ಕಾನೂನು ಸಹಾಯಕ ಪ್ರಧ್ಯಾಪಕರು,

ಸರ್ಕಾರಿ ಕಾನೂನು ಕಾಲೇಜು,

ರಾಮನಗರ.


**ಅಂತಿಮ ವರದಿ ಅರ್ಪಣೆ**

**ಇವರಿಗೆ**

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ – 580025.

2021

IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

# ಘೋಷಣೆ ಮತ್ತು ಪ್ರಮಾಣ ಪತ್ರ

# (Declaration of Certificate)

ನಾನು ಶಿವಣ್ಣನಾಯ್ಕ ಪ್ರಧಾನ ಸಂಶೋಧಕ,ಕಾನೂನು ಸಹಾಯಕ ಪ್ರಧ್ಯಾಪಕರು, ಸರ್ಕಾರಿ ಕಾನೂನು ಕಾಲೇಜು, ರಾಮನಗರ.ಈ ಮೂಲಕ ಘೋಷಿಸುತ್ತಿರುವುದು ಮತ್ತು ಪ್ರಮಾಣಿಕರಿಸುವುದೇನೆಂದರೇ.ಈ ಕಿರು ಸಂಶೋಧನಾ ಯೋಜನೆಯ ಶೀರ್ಷಿಕೆಯು ಕುಲಸಚಿವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ,ನವನಗರ,ಹುಬ್ಬಳ್ಳಿಯ ಇವರ ಕಚೇರಿ ಆದೇಶನಂ:KSLU/Reg/Acad/Minor Research Project/2018-19,2530 ದಿನಾಂಕ 13ನೇ ಫೆಬ್ರವರಿ 2019ರ ಅನ್ವಯ **"ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯುಗಳ ಸಾಂಪ್ರದಾಯಿಕ ವಿವಾದ ಪರಿಹಾರ ವಿಧಾನಗಳು** ರಂತೆ ಮೊದಲು ಅನುಮೋದಿತವಾಗಿತ್ತು. ನಂತರ, ನನ್ನ ಮನವಿ ಯಂತೆ ಕುಲಸಚಿವರು ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ, ನವನಗರ, ಹುಬ್ಬಳ್ಳಿಯ ಇವರ ಕಚೇರಿ ಆದೇಶ ಸಂ:ಕರಾಕಾವಿ/ವಿದ್ಯಾಮಂಡಳ/ಸಂಯೋಜನೆ/2020-21/-0262 ದಿನಾಂಕ07-6-2021 ಅನ್ವಯ ಯೋಜನೆಯ ಶೀರ್ಷಿಕೆಯನ್ನು **"ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗ ಡದೇವನಕೋಟೆ ತಾಲ್ಲೂಕಿನ ಬುಡಕಟ್ಟು ಸಮುದಾಯುಗಳ ಸಾಂಪ್ರಾದಾಯಿಕ ವಿವಾದ ಪರಿಹಾರ ವಿಧಾನಗಳು"**.ಎಂದು ಅನುಮೋದಿತ ವಾಗಿರುವುದು.ಈಕಿರು ಸಂಶೋಧನೆ'ಯು ನಂಬಿಕೆಗೆ ಅರ್ಹ (Bonafide) ವಾಗಿದೆ. ಈ ಕಿರು ಸಂಶೋಧನೆಯು 2019-21ನೇ ಸಾಲಿನಲ್ಲಿ ಕೈಗೊಳ್ಳಲಾಗಿದೆ, ಮುಂದುವರೆದಂತೆ, ಪ್ರಮಾಣಿಕರಿಸುವದೇನೆಂದರೇ ಪ್ರಸ್ತುತ ಸಲ್ಲಿಸುತ್ತಿರುವ ಕೃತಿಯು ಮೂಲ ಕೃತಿಯಾಗಿದ್ದು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಮಾರ್ಗಸೂಚಿಯಲ್ಲಿ ಪ್ರಸ್ತಾಪಿಸಿದಂತೆ ಈ ಸಂಶೋಧನಾ ಕೃತಿಯನ್ನು ಸಲ್ಲಿಸಲಾಗಿದೆ. ಹಾಗೂ ಈ ಸಂಶೋಧನಾ ಕಿರು ಪ್ರಬಂಧವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಅಥವಾ ಡಿಪ್ಲೋಮಾಕ್ಕಾಗಿ ಬೇರೆ ಯಾವುದೇ ವಿಶ್ವವಿದ್ಯಾಲಯಕ್ಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿರುವುದಿಲ್ಲ. ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಶಿವಣ್ಣನಾಯ್ಕ) **M.A,LL.M**
**ಪ್ರಧಾನ ಸಂಶೋಧಕ,**
(Principal Investigator)
ಕಾನೂನು ಸಹಾಯಕ ಪ್ರಧ್ಯಾಪಕರು,
ಸರ್ಕಾರಿ ಕಾನೂನು ಕಾಲೇಜು,
ರಾಮನಗರ.

**Registrar**
Karnataka State Law University
Navanagar, Hubballi-580 025.

**IQAC COORDINATOR**
Karnataka State Law University
Hubballi-25.

# ಕೃತಜ್ಞತೆಗಳು

"ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗ ಡದೇವನಕೋಟೆ ತಾಲ್ಲೂಕಿನ ಬುಡಕಟ್ಟು ಸಮುದಾಯಗಳ ಸಾಂಪ್ರಾದಾಯಿಕ ವಿವಾದ ಪರಿಹಾರವಿಧಾನಗಳು. ಶೀರ್ಷಿಕೆಯ ಕಿರು ಸಂಶೋಧನಾ ಯೋಜನೆಯನ್ನು ಅನುಮೋದಿಸಿದಂತೆ, ನಾನು ಈ ಯೋಜನೆಯನ್ನು ಕೈಗೊಳ್ಳಲು ಹಣಕಾಸಿನ ನೆರವು ಒದಗಿಸಿದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನವನಗರ ಹುಬ್ಬಳ್ಳಿ ಇವರಿಗೆ ಚಿರುಋಣಿ ಯಾಗಿದ್ದೇನೆ.ಈ ಕಿರು ಸಂಶೋಧನಾ ಯೋಜನೆ ಕೈಗೊಳ್ಳಲು ಉತ್ತೇಜಿಸಿ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೈತಿಕ ಬೆಂಬಲ ನೀಡಿದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿಯ ಕುಲಪತಿಗಳಾದ Prof. Dr.P.ಈಶ್ವರಭಟ್ ರವರಿಗೂ, ವಿಶ್ವವಿದ್ಯಾಲಯದ ಶೈಕ್ಷಣಿಕ ಮುಖ್ಯಸ್ಥರಾದ ಪ್ರೊ.(ಡಾ॥) ಸಿ.ಎಸ್.ಪಾಟೀಲ್ ರವರಿಗೂ, ಕುಲಸಚಿವರಾದ ಪ್ರೊ ಡಾ॥ ರತ್ನ ಭರಮಗೌಡರ ಹಾಗೂ ಪ್ರೊ ಡಾ॥ G.B..ಪಾಟೀಲ್ ರವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ, ಹಾಗೂ ವಿಶ್ವವಿದ್ಯಾಲಯದ ಸಂಬಂಧಪಟ್ಟ ಎಲ್ಲಾ ಬೋಧಕರು ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಗು ನನ್ನ PhD ಮಾರ್ಗದರ್ಶರಾದ Prof. Dr. ತಾರನಾಥ ಪ್ರಾಂಶುಪಾಲರು S D M ಕಾನೂನು ಕಾಲೇಜು ಮಂಗಳೂರು ಇವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸರ್ಕಾರಿ ಕಾನೂನು ಕಾಲೇಜು ಹಾಸನ ಇಲ್ಲಿನ ಪ್ರಾಂಶುಪಾಲರು ಮತ್ತು ನನ್ನ ಸಹದ್ಯೋಗಿ ಭೋದಕರು ಹಾಗು ಭೋದಕೇತರರಿಗೂ ನನ್ನ ಕೃತಜ್ಞತೆಗಳು. ಹಾಗು ರಾಮನಗರ ಸರ್ಕಾರಿ ಕಾನೂನು ಕಾಲೇಜಿನ ಪ್ರಾಂಶುಪಾಲರು ಹಾಗೂ ಇತರ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ನನಗೆ ಪ್ರತ್ಯೆಕ್ಷವಾಗಿ ಪರೋಕ್ಷವಾಗಿ ಈ ಕಿರು ಸಂಶೋಧನೆ ಕೈಗೊಳ್ಳಲು ಸಹಾಯ ಮಾಡಿದ್ದಾರೆ, ಅವರಿಗೂ ನನ್ನ ಕೃತಜ್ಞತೆಗಳು. ಹೆಗ್ಗಡದೇವನಕೋಟೆಯ ಬುಡಕಟ್ಟು ಜನರೊಂದಿಗೆ ಸುಮಾರು ನಾಲ್ಕು ದಶಕಗಳಿಂದಲೂ ಒಡನಾಟದಲ್ಲಿದ್ದು ದಿನಪ್ರತಿಕೆಗಳಲ್ಲಿ ಬುಡಕಟ್ಟು ಜನರ ಕುರಿತು ಅಂಕಣ ಬರಹಗಾರರು, ವಿದ್ವಾಂಸರು ಆದ ಶ್ರೀ ಕ್ಷೀರಸಾಗರ ರವರು, ಅದೇ ರೀತಿ ಬುಡಕಟ್ಟು ಜನರ ಹಕ್ಕುಗಳ ಬಗ್ಗೆ ಸುಮಾರು ನಾಲ್ಕು ದಶಕಗಳಿಂದಲು ಹೋರಟಗಾರರಾಗಿ, ಜವಾನುರಾಗಿ ಯೂಗಿರುವ ಹೆಚ್.ಡಿ.ಕೋಟೆಯ ಜೇನುಕುರುಬ ಬುಡಕಟ್ಟು ಸಮುದಾಯದವರಾದ ಶ್ರೀಯುತ ಸೋಮಣ್ಣನವರು ಬುಡಕಟ್ಟು ಜನರೊಂದಿಗೆ ಮಾಹಿತಿ ಸಂಗ್ರಹಿಸುವಾಗ ನನೊಂದಿಗೆ ಇದ್ದು ಸಹಾಯ ಮಾಡಿರವರು. ಅವರಿಗೂ ನನ್ನ ಕೃತಜ್ಞತೆಗನ್ನು ಅರ್ಪಿಸುತ್ತೇನೆ. ಚಾಮರಾಜನಗರ ಜಿಲ್ಲೆಯಲ್ಲಿರುವ ಬುಡಕಟ್ಟು ಜನರ ಸಾಂಪ್ರದಾಯಿಕ ನ್ಯಾಯ ಪದ್ಧತಿ ಬಗ್ಗೆ ಮಾಹಿತಿ ಕಲೆಹಾಕಲು ಪತ್ಯಕ್ಷ ಮತ್ತು ಪರೋಕ್ಷವಾಗಿ ನನಗೆ ಸಹಾಯ ಮಾಡಿದ ಸೋಲಿಗ ಬುಡಕಟ್ಟು ಸಮುದಾಯದ ಮುಖಂಡರು ಹಾಗೂ ವಿದ್ವಾಂಸರಾದ ಡಾ॥ ಮಾದೇಗೌಡ.ಸಿ, ಅಚ್ಚುಗೆ ಗೌಡ, ಬಸವರಾಜು (ಸೋಲಿಗರ ಕಲಾ ತಂಡದ ನಾಯಕರು) ಬಿಳಿಗಿರಿ ರಂಗನಬೆಟ್ಟ ಹಾಗು ಮಾಹಿತಿ ನೀಡಿ ಸಹಕರಿಸಿದ ಚಾಮರಾಜನಗರ ಜಿಲ್ಲೆಯ ಎಲ್ಲಾ ಸೋಲಿಗ ಬುಡಕಟ್ಟು ಹಾಡಿಯ ಯಜಮಾನರುಗಳು ಮತ್ತು ಮಾಹಿತಿದಾರರಿಗೆ ಅಲ್ಲದೆ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಎರವ, ಬೆಟ್ಟ ಕುರುಬ ಮಾಹಿತಿದಾರರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.ಅದೆ ರೀತಿ ಈ ಕಿರು ಸಂಶೋಧನೆ ಕೈಗೊಳ್ಳಲು ಸಹಕರಿಸಿದ ಡಾ॥ ಯು. ರವಿಯವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರಧಾನ ಸಂಶೋಧಕರು.
ಶಿವಣ್ಣ ನಾಯ್ಕ

IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

| ಪರಿವಿಡಿ (Contents) | |
|---|---|
| | |
| ಘೋಷಣೆ ಮತ್ತು ಪ್ರಮಾಣ ಪತ್ರ | I |
| ಕೃತಜ್ಞತೆಗಳು | II |
| ಪರಿವಿಡಿ | III-V |
| ಅಧ್ಯಾಯ – 01 | |
| ಭಾರತೀಯ ಬುಡಕಟ್ಟು ಪಕ್ಷಿನೋಟ | |
| | Page |
| 1.1. ಪೀಠಿಕೆ | 1 |
| 1.2. ಆದಿವಾಸಿಗಳು ಎಂದರೆ ಯಾರು? | 2 |
| 1.3.ಆದಿವಾಸಿ ಸಮುದಾಯದ ವ್ಯಾಖ್ಯೆ: | 3 |
| 1.4. ಆದಿವಾಸಿಗಳ ಗುಣಲಕ್ಷಣಗಳು | 4 |
| 1.5. ಭಾರತದಲ್ಲಿ ಆದಿವಾಸಿಗಳ ಬೌಗೋಳಿಕ ಹರಡಿಕೆ. | 5 |
| 1.6. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡ (ST) ಸಮುದಾಯ | 5 |
| 1.7.ಚಾಮರಾಜನಗರ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯ | 6 |
| 1.8. ಬುಡಕಟ್ಟು ನ್ಯಾಯ ಪರತೆ | 7 |
| 1.9. ಕರ್ನಾಟಕದಲ್ಲಿ ಬುಡಕಟ್ಟು ವೈವಿದ್ಯತೆ | 7 |
| 1.10.ಕರ್ನಾಟಕದಲ್ಲಿ ಬುಡಕಟ್ಟು ಸಾಂಪ್ರದಾಯಿಕ ನ್ಯಾಯಪದ್ಧತಿ | 7 |
| 1.11.ಉಪಸಂಹಾರ | 7 |
| | |
| ಅಧ್ಯಾಯ 2 | |
| **ಸಂಶೋದನಾ ವಿಧಾನ (Research Methodology)** | |
| 2.1.ಪೀಠಿಕೆ (Introduction) | 8 |
| 2.2. ಗ್ರಂಥಗಳ ಪರಾಮರ್ಶೆ (Review of Literature) | 8-11 |
| 2.3. ಅಧ್ಯಾಯನದ ಪ್ರಾಕ್‌ಕಲ್ಪನೆ (Hypothesis) | 12 |
| 2.4. ಅಧ್ಯಯನದ ಉದ್ದೇಶ (Object Of study) | 13 |
| 2.5 ಸಂಶೋಧನೆಯ ಪ್ರಶ್ನಾವಳಿಗಳು (Research questions) | 13 |
| 2.6. ಅಧ್ಯಯನದ ಕ್ಷೇತ್ರ ಮತ್ತು ದತ್ತಾಂಶ ಸಂಗ್ರಹ (Field of study and data collection) | 13 |
| 2.7. ಪ್ರಾಥಮಿಕ ದತ್ತಾಂಶಗಳ ಸಂಗ್ರಹ (Primary sources of data) | 14 |

IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

| | |
|---|---|
| 2.8.ಅನುಷ್ಠಾಂಗಿಕ ಮೂಲಗಳು (Secondary sources) | 14 |
| 2.9. ಸಂಶೋಧನಾ ಅಂತರ (Research gap) | 14 |
| 2.10. ಸಂಶೋದನಾ ಅವಧಿ (Research period) | 15 |
| 2.11. ವರದಿಯ ಸಂಯೋಜನೆ (Organization of Report) | 15 |
| | |
| **ಅಧ್ಯಾಯ 03** | |
| **ಭಾರತದಲ್ಲಿ ಪಂಚಾಯ್ತಿಯ ಪರಿಕಲ್ಪನೆಗಳು** | |
| **(The Panchayat concepts in India)** | |
| 3.1.ಪೀಠಿಕೆ: | 16 |
| 3.2. ಪಂಚಾಯ್ತಿಯ ಅರ್ಥ | 16 |
| 3.3. ಪಂಚಾಯ್ತಿಯ ವಿಧಗಳು | 16-18 |
| 3.4. ಜಾತಿ ಪಂಚಾಯ್ತಿಯ ಕಾರ್ಯಗಳು | 18 |
| 3.5.ಜಾತಿ ಪಂಚಾಯ್ತಿಯಲ್ಲಿ ವಿಧಿಸುವ ದಂಡ, ಮತ್ತು ಶಿಕ್ಷೆಗಳು | 19 |
| 3.6. ಆದಿವಾಸಿಗಳು ಮತ್ತು ಸಾಂಪ್ರದಾಯಿಕ ಕಾನೂನುಗಳು | 19 |
| 3.7. ಸಂಪ್ರದಾಯಿಕ ಕಾನೂನುಗಳು ಮತ್ತು ಭಾರತೀಯ ಸಂವಿಧಾನ | 19-20 |
| 3.8.ಭಾರತೀಯ ಇತರ ಕಾಯ್ದೆಗಳಲ್ಲಿ ಬುಡಕಟ್ಟು ಹಕ್ಕು, ರೂಢಿ ಸಂಪ್ರದಾಯಗಳಿಗೆ ಮಾನ್ಯತೆ. | 20-21 |
| 3.9. ವಿವಾದದ ದ ಅರ್ಥ ವಿವರಣೆ | 21 |
| 3.10. ವಿವಾದಗಳ ವಿಧಗಳು | 21 |
| 3.11. ವಿವಾದಗಳ ವಿಷಯ ವಸ್ತು | 21--22 |
| 5.12. ನಿರ್ಣಯ ಪ್ರಕ್ರಿಯೆ | 22--23 |
| 3.13. ಬುಡಕಟ್ಟು ಪರ್ಯಾಯ ವಿವಾದ ಪರಿಹಾರ ವ್ಯವಸ್ಥೆ | 24-25 |
| 3.14 ಉಪಸಂಹಾರ | 26 |
| | |
| **ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯ ಸಾಂಪ್ರಾದಾಯಿಕ ವಿವಾದ ಪರಿಹಾರ ವಿದಾನಗಳು.** | |
| **ಅಧ್ಯಾಯ 04** | |
| **ಸೋಲಿಗ ಬುಡಕಟ್ಟು ವಿವಾದ ಪರಿಹಾರ ವ್ಯವಸ್ಥೆ** | |
| | Page |
| 4.1ಪೀಠಿಕೆ | 27 |
| 4.2. ಚಾಮರಾಜನಗರ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ | 27 |
| 4.3 ಚಾಮರಾಜನಗರ ಜಿಲ್ಲೆಯ ಬೌತಿಕ ಲಕ್ಷಣಗಳು | 27 |


IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

| | |
|---|---|
| 4.4. ಸೋಲಿಗರ ಜನಸಂಖ್ಯೆ | 27-28 |
| 4.5. ಸೋಲಿಗರ ಐತಿಹಾಸಿಕ ಹಿನ್ನೆಲೆ | 28-30 |
| 4.6. ಸೋಲಿಗರ ಸಾಂಪ್ರದಾಯಿಕ ಕುಲ ಪಂಚಾಯ್ತಿ | 31-39 |
| 4.7 ಕಂಟಕ ಶೋಧನೆ ಗಳು | 40-43 |
| 4.8.ಕುಲ ಪಂಚಾಯತಿ ಪ್ರಕ್ರಿಯೆ | 43-46 |
| 4.9.ಶಿಕ್ಷೆಗಳು | 43-50 |
| 4.10. ರಾಜಿ ಸಂಧಾನ | 50 |
| 4.11.ತೀರ್ಪು ಪ್ರಕಟಣೆ ಮತ್ತು ಅನುಷ್ಠಾನ | 50 |
| 4.12. ಮೇಲ್ಮನವಿ ಸಲ್ಲಿಸುವಿಕೆ | 51 |
| 4.13. ಕುಲಪಂಚಾಯ್ತಿಯ ಅನುಷಕ್ಷಾಂಗಿಕ ಕಾರ್ಯ ಗಳು | 51 |
| 4.14. ಕುಲಪಂಚಾಯ್ತಿ ಹಾಗೂ ಪೂರ್ವ ನಿರ್ಣಯಗಳು | 51 |
| 4.15. ಕುಲಪಂಚಾಯತಿ ಮತ್ತು ಆಧುನಿಕ ನ್ಯಾಯ ಪದ್ಧತಿಯೊಂದಿಗೆ ತುಲನೆ | 52 |
| 4.16. ಆಧುನಿಕ ನ್ಯಾಯ ಪದ್ಧತಿಯ ಅವಲಂಬನೆ(Dependency on modern justice system) | 52 |
| 4.17. ಪ್ರಮಾದಗಳು | 52-54 |
| 4.18. ಬದಲಾದ ಪರಿಸ್ಥಿತಿ( Changed Situation) | 54 |
| 4.19. ನಾರಿ ಅದಾಲತ್ ( NAARI-ADALAT) | 54-58 |
| 4.21. ಉಪಸಂಹಾರ (Conclusion) | 58 |
| | |
| **ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ಬುಡಕಟ್ಟು ಸಮುದಾಯದ ಕುಲ ಪಂಚಾಯ್ತಿ ವ್ಯವಸ್ಥೆಗಳು** | |
| **ಅಧ್ಯಾಯ 05** | |
| **ಬೆಟ್ಟ ಕುರುಬ. 'ಅಂಬಾಲ ಕಟ್ಟೆ' ನ್ಯಾಯ ಪದ್ಧತಿ.** | |
| 5.1.ಪೀಠಿಕೆ: | 59 |
| 5.2.ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಕ್ಷೇತ್ರ:- | 59 |
| 5.3.ಬೆಟ್ಟ ಕುರುಬರ ಮೂಲ. | 60 |
| 5.4. ಸಾಮಾಜಿಕ ಜೀವನ | 60 |
| 5.5.ಧಾರ್ಮಿಕತೆ | 61 |
| 5.6.ಬೆಟ್ಟ ಕುರುಬ ಸಮುದಾಯದ 'ಅಂಬಾಲ ಕಟ್ಟೆ' ನ್ಯಾಯ ಪದ್ಧತಿ. | 62 |


IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

| | |
|---|---|
| 5.7.ಪಂಚಾಯಿತಿಯ ರಚನೆ ಹಾಗೂ ಸದಸ್ಯರುಗಳು | 62 |
| 5.8..ಕುಲ ಪಂಚಾಯಿತಿ ನಡೆಯುವ ಸ್ಥಳ | 62 |
| 5.9. ಪಂಚಾಯಿತಿ ಪ್ರಕ್ರಿಯೆಗಳು | 62–67 |
| 5.10. ಆಧುನಿಕ ನ್ಯಾಯ ಪದ್ಧತಿ ಹಾಗೂ ಬೆಟ್ಟ ಕುರುಬರು | 68 |
| 5.8. ಉಪಸಂಹಾರ(Conclusion) | 68 |
| | |
| **ಅಧ್ಯಾಯ 06** | |
| **ಯರವರ ಚಪ್ಪರ ಕಟ್ಟೆ ಕುಲ ಪಂಚಾಯ್ತಿ ವ್ಯವಸ್ಥೆ** | |
| 6.1.ಪೀಠಿಕೆ | 69 |
| 6.2.ಯರವರ ಮೂಲ ಮತ್ತು ಜೀವನ ವ್ಯವಸ್ಥೆ | 69 |
| 63.ಕ್ಷೇತ್ರ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಪ್ರದೇಶ | 70 |
| 6.4.ಚಪ್ಪರ ಕಟ್ಟೆ ಕುಲ ಪಂಚಾಯ್ತಿ ವ್ಯವಸ್ಥೆ | 71–72 |
| 6.5. ಪಂಚಾಯಿತಿ ಪ್ರಕ್ರಿಯೆಗಳು | 73–75 |
| 6.6. ಅಪರಾಧಗಳು ಮತ್ತು ದಂಡನೆಗಳು | 75–80 |
| 6.7.ನಾಡಕಾರರ ತೀರ್ಪಿಗೆ ಗೌರವ | 80 |
| 6.8.ಪೋಲೀಸ್ ಪ್ರಕರಣ ಮತ್ತು ಕುಲ ಪಂಚಾಯ್ತಿ ನಡುವಿನ ಸಾಮರಸ್ಯ | 81 |
| 6.9.ಕುಲ ಸ್ನೇಹ ವ್ಯಾಜ್ಯ ನಿರ್ವಹಣೆ | 81 |
| 6.10.ಉಪಸಂಹಾರ | 82 |
| | |
| **ಅಧ್ಯಾಯ – 07** | |
| **ಫಲಿತಗಳು ಸಲಹೆಗಳು ಮತ್ತು ಉಪಸಂಹಾರ** | |
| **( Findings suggession and conclusions)** | |
| 7.1. ಸೋಲಿಗ ಕುಲ ಪಂಚಾಯ್ತಿ ಫಲಿತಗಳು | 83–85 |
| 7.2. ಬೆಟ್ಟ ಕುರುಬರ ಕುಲಪಂಚಾಯ್ತಿ ಫಲಿತಗಳು | 85 |
| 7.3. ಯರವರ ಕುಲಪಂಚಾಯ್ತಿ ಪಲಿತಗಳು | 85–86 |
| 7.4. ಸಲಹೆಗಳು | 86-87 |
| 7.5. ಉಪಸಂಹಾರ | 87–88 |


IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

| ಅನುಬಂಧಗಳು | |
|---|---|
| 1. ಅಂಕಿ ಅಂಶಗಳ ಪಟ್ಟಿ ಯಾದಿ | 89–123 |
| 2. ನಕ್ಷೆಗಳ ಯಾದಿ | 124–125 |
| 3. ಛಾಯಾ ಚಿತ್ರಗಳ ಯಾದಿ | 126–130 |
| 4. ಸಂದರ್ಶನ ಅನುಸೂಚಿ | 131–132 |
| 5. ಗ್ರಂಥಋಣ ಯಾದಿ | 133 |
| 6. ಮಾಹಿತಿದಾರ ಯಾದಿ | 134–136 |

IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

# ಅಧ್ಯಾಯ – 01
## ಭಾರತೀಯ ಬುಡಕಟ್ಟು ಪಕ್ಷಿನೋಟ
## (Bird Eye view of Indian Tribe)

**1.1.ಪೀಠಿಕೆ**

ವಿಶ್ವದಾದ್ಯಂತ ಎಲ್ಲಾ ರಾಷ್ಟ್ರಗಳಲ್ಲಿಯೂ ಮೂಲನಿವಾಸಿಗಳಾದ ಬುಡಕಟ್ಟು ಸಮುದಾಯದವರು ಇದ್ದಾರೆ. ವಿಶ್ವದ ಏಳು ಖಂಡಗಳಲ್ಲಿ ಆಫ್ರಿಕ ಖಂಡವು ಅತೀ ಹೆಚ್ಚು ಬುಡಕಟ್ಟು ಸಮುದಾಯ ಹೊಂದಿರುವ ಖಂಡವಾಗಿದೆ. ಭಾರತವು ಎರಡನೇಯ ಅತೀ ಹೆಚ್ಚು ಬುಡಕಟ್ಟು ಸಮುದಾಯ ಹೊಂದಿರುವ ರಾಷ್ಟ್ರವಾಗಿದೆ. ಭಾರತದಲ್ಲಿ ಸರಿ ಸುಮಾರು 725 ಮೂಲನಿವಾಸಿಗಳನ್ನು ಬುಡಕಟ್ಟು ಜನಾಂಗದವರೆಂದು ಪರಿಗಣಿಸಲಾಗಿದೆ. 2011 ರ ಜನಗಣತಿ ಪ್ರಕಾರ ಭಾರತದ ಓಟ್ಟು ಜನ ಸಂಖ್ಯೆಯ 8.6% ಗಳಷ್ಟು ಪರಿಶಿಷ್ಟ ಪಂಗಡದವರು ಇದ್ದಾರೆ. ಬ್ರಿಟೀಷರ ಕಾಲದಿಂದಲೂ, ಇಂಗ್ಲೀಷಿನವರು, ಸ್ಥಳೀಯ ದಳ್ಳಾಳಿಗಳು, ಆಯಾ ಪ್ರಾಂತ್ಯದ ರಾಜರುಗಳು ಹಾಗೂ ಈಗ ಸ್ವತಂತ್ರಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ, ಹಲವಾರು ರೀತಿಯ ದಬ್ಬಾಳಿಕೆ ಮತ್ತು ಶೋಷಣೆ ಮಾಡಿಕೊಂಡೇ ಬರಲಾಗುತ್ತಿದೆ. ಭಾರತ ಸರ್ಕಾರವು 1950 ರಲ್ಲಿ ಸುಮಾರು 571 ಬುಡಕಟ್ಟುಗಳನ್ನೂ ಪರಿಶಿಷ್ಟ ವರ್ಗ ಎಂದು ಘೋಷಣೆಮಾಡಿ, ಇವರಿಗೆ ವಿದ್ಯಾಭ್ಯಾಸ, ರಾಜಕೀಯ ಹಾಗೂ ಉದ್ಯೋಗ ಅವಕಾಶಗಳೂ ಕಲ್ಪಿಸಲು ಸಂವಿಧಾನಿಕ ರಕ್ಷಣೆ ನೀಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ 50 ಬುಡಕಟ್ಟು ಪಂಗಡಗಳನ್ನು ಗುರುತಿಸಲಾಗಿದೆ.

ಭಾರತದ ಸಂವಿಧಾನದಲ್ಲಿ ಬುಡಕಟ್ಟು ಜನಾಂಗವನ್ನು **'ಪರಿಶಿಷ್ಟ ಪಂಗಡ'** (scheduled tribes) ಎಂದು ಮಾನ್ಯತೆ ನೀಡಲಾಗಿದೆ. ಹಾಗೂ ಇವರ ಶ್ರೆಯೋಭಿವೃದ್ಧಿಗೆ, ಬುಡಕಟ್ಟು ಜನಾಂಗದವರು ವಾಸಿಸುವ ಪ್ರದೇಶಗಳನ್ನು ಪರಿಶಿಷ್ಟ ಪ್ರದೇಶ (scheduled area) ಹಾಗೂ ಪರಿಶಿಷ್ಟ ಪಂಗಡ ಪ್ರದೇಶ (tribal area) ಎಂದು ಗುರುತಿಸಿದೆ. ಸಂವಿಧಾನಾತ್ಮಕವಾಗಿ ಇತರರಂತೆ ಸಮಾನ ಸ್ಥಾನ ಮಾನ ಕಲ್ಪಿಸುವ ಸಲುವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ರಾಜ್ಯ ಸರ್ಕಾರಗಳು ಹಲವು ಸಮಾಜ ಕಲ್ಯಾಣ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ. ಪ್ರತೀ ವರ್ಷದ ಆಯವ್ಯಯದಲ್ಲಿ ಪರಿಶಿಷ್ಟ ಪಂಗಡ (ST) ದವರ ಅಭಿವೃದ್ಧಿಗಾಗಿ Tribal sub-plan ಅಡಿಯಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡಿ, ಆ ಸಮುದಾಯದ ಒಳಿತಿಗಾಗಿ ಬಳಸಲಾಗುತ್ತಿದೆ.ಬುಡಕಟ್ಟು ಜನರ ಅಭಿವೃದ್ಧಿ ಸಲುವಾಗಿ 1999 ರಲ್ಲಿ ಕೇಂದ್ರ ಸರ್ಕಾರವು ಬುಡಕಟ್ಟು ಮಂತ್ರಾಲಯ (Ministry of tribal affairs) ವನ್ನು ಸ್ಥಾಪಿಸಿದೆ. ಸದರಿ ಬುಡಕಟ್ಟು ಜನರ ಸಮಸ್ಯೆಗೆ ಸ್ಪಂದಿಸಲು ಬುಡಕಟ್ಟು ಮಂತ್ರಿ ಸ್ಥಾನವನ್ನು ನೀಡಲಾಗುತ್ತಿದೆ. ಇದರೊಂದಿಗೆ ಪರಿಶಿಷ್ಟ ಪಂಗಡಗಳ ಸಲಹಾ ಸಮೀತಿ (Tribal advisory council) ಸ್ಥಾಪಿತವಾಗಿದೆ.

ಭಾರತದ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳನ್ನು ಹೊರತು ಪಡಿಸಿದರೆ ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಪರಿಶಿಷ್ಟ ಪಂಗಡ (ST) ದ ಜನರಿದ್ದಾರೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಅತೀ ಹೆಚ್ಚು ಬುಡಕಟ್ಟು ಸಮುದಾಯದವರಿದ್ದಾರೆ.ಹಾಗೂ ಈಶಾನ್ಯ ರಾಜ್ಯಗಳಲ್ಲಿ ಬುಡಕಟ್ಟು ಹೆಚ್ಚು ವಾಸಿಸುವ



IQAC COORDINATOR
Karnataka State Law University
Hubballi-25.
Registrar
Karnataka State Law University
Navanagar, Hubballi-580 025.

ಜನರಿರುವ ಪ್ರದೇಶವನ್ನು '6ನೇ ಪರಿಶಿಷ್ಟ ಪ್ರದೇಶ' (sixth scheduled area) ಎಂದು ಘೋಷಿಸಲಾಗಿದೆ. ಇತರ ರಾಜ್ಯಗಳಲ್ಲಿ 'ಬುಡಕಟ್ಟು ಪ್ರದೇಶ' (Tribal area) ಎಂದು ಗುರುತಿಸಲಾಗಿದೆ.

ಆದರೇ ಇತ್ತಿಚಿನ ದಿನಗಳಲ್ಲಿ ಜಾಗತೀಕರಣ, ಖಾಸಗೀಕರಣ ಔದ್ಯೋಗಿಕರಣಗಳು ಇವರ ಸಾಂಸ್ಕೃತಿಕ ಜೀವನ ಕ್ರಮದ ಮೇಲೆ ಪರಿಣಾಮ ಬೀರಿದೆ. ತಮ್ಮ ಸಾಂಸ್ಕೃತಿಕತೆಯನ್ನು ಗುರುತಿಸಿಕೊಳ್ಳಲು (Cultural Identity) ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಕಾಯ್ದೆಗಳು (Forest legislations), ವನ್ಯಜೀವಿ ಸಂರಕ್ಷಣಾ ಕಾಯ್ದೆಗಳು (Wild life protection Act), ಸರ್ಕಾರದ ಯೋಜನೆಗಳು (Government policies) ಅರಣ್ಯವಾಸಿಗಳ ಮೂಲ ನೆಲೆಯನ್ನೆ ಕಳೆದುಕೊಳ್ಳುವಂತೆ ಮಾಡಿವೆ. ಕಾಡಿನಿಂದ ಬುಡಕಟ್ಟು ಸಮುದಾಯ ಒಕ್ಕಲೆಬ್ಬಿಸಿವೆ. ಬುಡಕಟ್ಟು ಜನರಲ್ಲದವರು (Non-tribals) ಬುಡಕಟ್ಟು ಜನರ ನೆಲೆಗಳನ್ನು ಆಕ್ರಮಿಸಿಕೊಂಡಿವೆ. ಬೃಹತ್ ನೀರಾವರಿ ಯೋಜನೆಗಳು (Major irrigation projects) ಬುಡಕಟ್ಟು ಜನರ ಆಸ್ತಿಪಾಸ್ತಿಗಳನ್ನು ನುಂಗಿಹಾಕಿವೆ. ಅರಣ್ಯನಾಶ, ಕಾಡುಗಳ್ಳರ ದೌರ್ಜನ್ಯಗಳು ಬುಡಕಟ್ಟು ಜನಜೀವನಕ್ಕೆ ಕೊಡಲಿ ಏಟು ನೀಡಿವೆ.

ಕಾಡಿನಿಂದ ಹಲವು ಕಾರಣಗಳಿಂದ ಬುಡಕಟ್ಟು ಜನಾಂಗವನ್ನು ಸ್ಥಳಾಂತರ (Displacement) ಮಾಡಲಾಗಿದೆ. ಸ್ಥಳಾಂತರಗೊಂಡ ಇವರನ್ನು ಸರಿಯಾದ ರೀತಿಯಲ್ಲಿ ಪುನರ್ವಸತಿ (Rehabilitation) ಕಲ್ಪಿಸಲಾಗಿಲ್ಲ. ಕಾನನದ ನಂಟು ಹೊಂದಿದ ಕಾನನದ ಮೂಲನಿವಾಸಿಗಳಾದ ಬುಡಕಟ್ಟು ಸಮುದಾಯ ಕಾಡಿನಿಂದ ಒತ್ತಾಯ ಪೂರ್ವಕವಾಗಿ ಯೋಜನೆ ಹೆಸರಲ್ಲಿ ಹೊರಹಾಕಲಾಗಿದೆ. ಕಾನನದಲ್ಲಿ ಸುಖಃ, ನೆಮ್ಮದಿಯಿಂದ ಬದುಕು ಸಾಗಿಸುತ್ತಾ ಕಾಡುಪ್ರಾಣಿಗಳು, ಹಾಗೂ ವನ್ಯ ಸಂಪತ್ತು (forest resources) ನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ ಬುಡಕಟ್ಟು ಸಮುದಾಯದ ಜನರು ತಮ್ಮ ಮೂಲನೆಲೆಯನ್ನು ಕಳೆದುಕೊಂಡ ಮೇಲೆ ಹಲವರು ನಿರ್ಗತಿಕರಾಗಿದ್ದಾರೆ. ಲಕ್ಷಾಂತರ ಜನರು ತಮ್ಮ ಜೀವ ಕಳೆದುಕೊಂಡಿದ್ದಾರೆ. ಇವರಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿ, ಜೀವನ ನಿರ್ವಹಣೆ ಮಾಡಲು ಬವಣೆ ಪಡೆಯುವ ಸ್ಥಿತಿಗೆ ತಲುಪಿದ್ದಾರೆ. ಹಲವರು ತಲತಲಾಂತರದಿಂದ ಬದುಕು ನಡೆಸುತ್ತಿದ್ದು ಮೂಲ ಕಾನನ ನೆಲೆಯನ್ನು ಕಳೆದುಕೊಂಡು, ಜೀವನ ನಿರ್ವಹಣೆಗೆ ಕೂಲಿಕಾರ್ಮಿಕರಾಗಿ, ಜೀತದಾಳುಗಳಾಗಿ, ಕೃಷಿ ಕಾರ್ಮಿಕರಾಗಿ ಬದುಕು ನಡೆಸುವ ಸ್ಥಿತಿಗೆ ತಲುಪಿದೆ. ಮೊದಲೆ ಬಡತನದ ಕರಿನೆರಳಲ್ಲಿ ಬದುಕುತಿದ ಈ ಜನಸಮುದಾಯದ ಜೀವನ ಮಟ್ಟ ಮತ್ತಷ್ಟು ಕುಸಿದು ನಿರ್ಗತಿಕ ಸ್ಥಿತಿ ತಲುಪುವಂತಾಯಿತು. ಆದುದರಿಂದ ಅವರ ಜೀವನ ಮಟ್ಟ ಸುಧಾರಿಸಲು ಸಂವಿಧಾನಾತ್ಮಕ ರಕ್ಷಣೆಯೊಂದಿಗೆ ಸರ್ಕಾರ ಹಲವು ಸಮಾಜ ಕಲ್ಯಾಣ ಯೋಜನೆ ಹಮ್ಮಿಕೊಂಡಿ ದೆ.

ಬುಡಕಟ್ಟು ಸಮುದಾಯದ ಜನರು ತಮ್ಮದೇ ಆದ ರೂಢಿ ಮತ್ತು ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ಈ ರೂಢಿ ಮತ್ತು ಸಂಪ್ರದಾಯಗಳು, ಅವರ ಜೀವನ ಕ್ರಮದ ಮೇಲೆ ಪರಿಣಾಮ ಬೀರುತ್ತವೆ. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ಅಂಶಗಳ ಮೇಲೆ ಅವರು ರೂಢಿಸಿಕೊಂಡ ರೂಢಿ ಮತ್ತು ಸಂಪ್ರದಾಯವೆ, ಮುಖ್ಯ ಪಾತ್ರ ವಹಿಸುತ್ತದೆ. ಪ್ರತಿಯೊಂದು ಬುಡಕಟ್ಟು ಸಮುದಾಯದಲ್ಲಿಯೂ ತಮ್ಮದೇ ಆದ ರೂಡಿ ಸಂಪ್ರದಾಯಗಳು ಚಾಲ್ತಿಯಲ್ಲಿದ್ದು ಒಂದು ಬುಡಕಟ್ಟು ಜನಾಂಗದಿಂದ ಇನ್ನೊಂದರಲ್ಲಿ ವ್ಯತ್ಯಾಸವಿರುತ್ತದೆ. ವೈವಾಹಿಕ ಸಂಬಂಧಗಳು, ಧಾರ್ಮಿಕ ವಿಧಿ



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

ವಿಧಾನಗಳು, ಆಸ್ತಿ ಪಾಸ್ತಿಗಳು ವಿಲೇವಾರಿ, ತಮ್ಮ ಸಮುದಾಯದಲ್ಲಿ ಉದ್ಭವಿಸುವ ವ್ಯಾಜ್ಯಗಳು (Litigations) ತಮ್ಮಲ್ಲೇ ಬಗೆಹರಿಸಿಕೊಳ್ಳುವ ವಿಶಿಷ್ಟ ಪದ್ಧತಿಯೂ ಇವರಲ್ಲಿ ಚಾಲ್ತಿಯಲ್ಲಿದೆ. ಆಧುನಿಕತೆ ಇವರ ಸಂಸ್ಕೃತಿ, ಆಚಾರ ವಿಚಾರಗಳ ಮೇಲೆ ಹೆಚ್ಚು ಪರಿಣಾಮ ಬೀರಿಲ್ಲ.

**1.2. ಆದಿವಾಸಿಗಳು ಎಂದರೆ ಯಾರು? (Who are Tribes)**

'ಟ್ರೈಬ್'Tribe ಎಂಬ ಆಂಗ್ಲ ಶಬ್ದ ಲ್ಯಾಟೀನ್ ಭಾಷೆಯ "ಟ್ರೈಬಸ್" (Tribus) ಎಂಬ ಮೂಲ ಪದದಿಂದ ಉತ್ಪತ್ತಿ ಹೊಂದಿದೆ. ಟ್ರೈಬಸ್ ಎಂದರೆ ಪ್ರಾಂತ್ಯ ಅಥವಾ 'ಮಂಡಲ' ಎಂಬ ಅರ್ಥವಿದೆ, 'ಟ್ರಿಬ್' ಪದವನ್ನು ಪಾಶ್ಚಿಮಾತ್ಯರು "ಸಮುದಾಯವಾಗಿ ಗುಂಪು ತಳೆಯುವ ಕುಟುಂಬಗಳ ಸಮೂಹ ಎಂಬುದಾಗಿ ಅರ್ಥೈಸಲಾಗಿದೆ. ಭಾರತದದಲ್ಲಿ 1928 ರಲ್ಲಿ ಸೈಮನ್ ಕಮೀಷನ್ (Simon commission-1928)ರಲ್ಲಿ ಮೊಟ್ಟ ಮೊದಲ ಬಾರಿಗೆ ಪರಿಚಯಿಸಿದ "ಷೆಡ್ಯೂಲ್ಡ್ ಟ್ರೈಬ್" (Scheduled Tribe) ಎಂಬ ಪದವನ್ನು ಭಾರತ ಸರ್ಕಾರವೂ ಕೂಡ ಒಪ್ಪಿಕೊಂಡಿತು. ಸಂವಿಧಾನ ನೀಡಿದ ವಿಶೇಷ ಸವಲತ್ತು ಪಡೆಯಲು ಆದಿವಾಸಿಗಳನ್ನು ಪಟ್ಟಿ ಮಾಡಿದೆ. ಆ ಪಟ್ಟಿಯಲ್ಲಿ ಸೇರಿದ ಅನೇಕ ಆದಿವಾಸಿಗಳೆಲ್ಲಾ'Tribes'ಎಂಬ ವರ್ಗಕ್ಕೆ ಸೇರಿಕೊಳ್ಳುತ್ತವೆ. 'ಆದಿವಾಸಿ' 'ಮೂಲನಿವಾಸಿಗಳು' ಎಬೋರಿಜನಲ್ಸ್ (aboriginals), ಹಿಲ್‌ಟ್ರೈಬ್ಸ್ (Hill Tribes), ಅದಿಪ್ರಜಾ, ಹಿಂದುಳಿದ ಹಿಂದುಗಳು (Backward Hindus) ಎಂಬ ಹಲವಾರು ಪದಗಳಿಂದ ಕರೆಯುವರು. 'ಅಂತರಾಷ್ಟ್ರೀಯ ಕಾರ್ಮಿಕ ಸಂಘ (ILO) ಆದಿವಾಸಿಗಳನ್ನು ಇಂಡಿಜೀನಸ ಪೀಪಲ್ (Indigenous people) 'ದೇಶೀಯ ಜನವರ್ಗ' ಎಂದು ಕರೆದಿದೆ. ಅಲ್ಲದೇ 'ವನ್ಯ ಜಾತಿಗಳು' 'ವನವಾಸಿಗಳು' ಅರಣ್ಯವಾಸಿಗಳು ಅಥವಾ 'ಕಾಡು ಜನಾಂಗ' (Jungle people or forest tribe) ಎಂದು ಕರೆಯುವುದುಂಟು. ಗಾಂಧೀಜಿಯವರು "ಗಿರಿಜನರು" ಎಂದು ಕರೆದರು. ಭಾತರದ ಸಂವಿಧಾನದ 342ನೇ ಕಲುಮಿನಲ್ಲಿ ಆದಿವಾಸಿಗಳನ್ನು "ಪರಿಶಿಷ್ಟ ಪಂಗಡಗಳು" (scheduled Tribes) ಎಂದು ಕರೆದಿದ್ದು ಈ ಪದವೇ ಹೆಚ್ಚು ಬಳಕೆಯಲ್ಲಿದೆ.

**1.3.ಆದಿವಾಸಿ (Tribes) ಸಮುದಾಯದ ವ್ಯಾಖ್ಯೆ:**

ಹಲವು ಮಾನವ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರು ಆದಿವಾಸಿ ಸಮಾಜದ ಬಗ್ಗೆ ವ್ಯಾಖ್ಯಾಯವ ನೀಡಲು ಪ್ರಯತ್ನಿಸಿದ್ದಾರೆ.ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

1. ಡಬ್ಲ್ಯೂ.ಜೆ.ಫೇರಿ– ರವರ ಪ್ರಕಾರ "ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನಾಡುವ ಜನ ಸಮೂಹವನ್ನು ಆದಿವಾಸಿ ಸಮೂಹ' ಎಂದು ಕರೆಯಬಹುದು.
2. ಎಸ್.ಸಿ.ದುಬೆ–"ಆದಿವಾಸಿ ಸಮೂಹವು ವಿಶಾಲ ವ್ಯಾಪ್ತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಸಾಮಾನ್ಯವಾಗಿ ಹಂಚಿಕೊಂಡಿರುವ, ವಾಸ್ತವಿಕವಾದ ಅಥವಾ ವಾಸ್ತವಿಕವೆಂದು ಪ್ರತೀತಿ ಇರುವ ವಂಶಾವಳಿಯನ್ನು ಹೊಂದಿದ ಮತ್ತು ಸಾಮೂಹಿಕ ಸ್ವರೂಪವನ್ನು ಹೊಂದಿರುವ (ಜನಾಂಗೀಯ) ಅಥವಾ ಮಾನವ ಬುಡಕಟ್ಟು ಜನ.
3. ಡಾ.ಡಿ.ಎನ್.ಮಂಜುಂದಾರ ರವರ ಪ್ರಕಾರ–ಒಂದೇ ನಾಮದೇಯವನ್ನು ಹೊಂದಿರುವ, ಒಂದೇ ಭೂ ನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನಾಡುವ ಮತ್ತು ವಿವಾಹ, ಉದ್ಯೋಗಗಳಿಗೆ



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

ಸಂಬಂಧಿಸಿದಂತೆ ಒಂದೇ ಬಗೆಯ ಉಪ ನಿಷೇಧಗಳಿಗೆ ಬದ್ಧವಾದ ಕುಟುಂಬಗಳ ಸಮೂಹವನ್ನು "ಆದಿವಾಸಿ ಸಮೂಹ" ಎಂದು ಕರೆಯಬಹುದು.

4. ಭಾರತೀಯ ಇಂಪೀರಿಯಲ್ ಗೆಜೆಟರ್:-"ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತಾಡುವ, ಒಂದೇ ಸ್ಥಳದಲ್ಲಿ ವಾಸಿಸುವ ಅಥವಾ ವಾಸಿಸಲು ಉದ್ಯುಕ್ತವಿರುವ, ಈ ಮೊದಲು ಒಳ ಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿರಬಹುದಾದರೂ ಈಗ ಹಾಗಿಲ್ಲದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮುದಾಯ" ಎನ್ನಬಹುದು.

**1.4. ಆದಿವಾಸಿಗಳ ಗುಣಲಕ್ಷಣಗಳು (Characteristics of Tribes)**

ಆದಿವಾಸಿಗಳು ಭಾರತದ ಉದ್ದಗಲಕ್ಕೂ ವಾಸವಾಗಿದ್ದು ತಮ್ಮದೇ ಆದ ಗುಣಲಕ್ಷಣಗಳನ್ನು ಹೊಂದಿರುವರು.

1. ಸಾಮಾನ್ಯ ಭೂಪ್ರದೇಶ (common territory) ಇವರು ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸುವರು. ಗುಡ್ಡಗಾಡಲ್ಲಿ ಕಣಿವೆ ಪ್ರದೇಶದಲ್ಲಿ ವಾಸಿಸುವರು.
2. ವಿಶಿಷ್ಟ ಹೆಸರು:-ಪ್ರತಿ ಬುಡಕಟ್ಟಿಗೂ ಒಂದೊಂದು ಪ್ರತೇಕ ಹೆಸರಿವೆ. ನಮ್ಮ ಕರ್ನಾಟಕದಲ್ಲಿ 50 ಸಮುದಾಯವನ್ನು ಪರಿಶಿಷ್ಟ ಪಂಗಡವೆಂದು ಗುರುತಿಸಿದ್ದಾರೆ. ಅವರದೇ ಆದ ಹೆಸರುಗಳಿವೆ. ಉದಾ:-ಜೇನು ಕುರುಬ, ಕೊರಗ, ಸೋಲಿಗ, ಬೆಟ್ಟ ಕುರುಬ, ಮೇದ, ಡುಂಗ್ರಿ ಗರೇಶಿಯ ಮುಂತಾದವು.
3. ಸಾಮಾನ್ಯ ಭಾಷೆ:- ಬುಡಕಟ್ಟು ಜನರ ಭಾಷೆಗೆ ಲಿಪಿ ಇಲ್ಲ. ಪ್ರತಿ ಬುಡಕಟ್ಟು ಜನರು ತಮ್ಮದೇ ಆದ ಭಾಷೆ ಮಾತಾಡುವರು. ಕರ್ನಾಟಕದಲ್ಲಿ ಜೇನು ಕುರುಬ ಬುಡಕಟ್ಟು ಜೇನುನುಡಿ, ಸೋಲಿಗರು ದ್ರಾವಿಡ ಭಾಷೆ (ಕನ್ನಡ ಮಿಶ್ರಿತ) ಯರವರು ಯರವ ಭಾಷೆ, ಬೆಟ್ಟಕುರುಬರು "ಬೆಟ್ಟಕುರುಬ ನುಡಿ" ಮಾತಾಡುವರು.
4. ಧಾರ್ಮಿಕ ನಂಬಿಕೆಗಳು (Religion beliefs)-ಬುಡಕಟ್ಟು ಜನರು ಪ್ರಕೃತಿ ಆರಾಧಕರು ಪಿತೃಪೂಜೆ, ಸರ್ವಚೇತನ ಆರಾಧಕರು (Animism) ಗಳಾಗಿದ್ದಾರೆ. ಕುಲದೇವರನ್ನು ಹೊಂದಿದ್ದು ತಮ್ಮದೇ ಕುಲಕ್ಕೆ ಸೀಮಿತವಾದ ಹಲವಾರು ಹಬ್ಬ ಹರಿದಿನ ಆಚರಿಸುವರು. ಉದಾ:-ಜೇನು ಕುರುಬರು, ಪಿತೃ ಪೂಜೆ ಮಾಡುವರು.
5. ಐಕತ್ಯ ಭಾವನೆ ಹೊಂದಿದ್ದು ಸಂಘಟಿತ ಜೀವನ ನಡೆಸುವರು.
6. ಸರಳ ಜೀವನ:-ಅತ್ಯಂತ ಸರಳ ಜೀವನ ನಡೆಸುವ ಇವರಲ್ಲಿ ಆಸ್ತಿಯ ಕಲ್ಪನೆ ತೀರ ಕಡಿಮೆ, ಮೋಸ ವಂಚನೆ ಯಂತಹ ಕೃತ್ಯಕ್ಕೆ ಕೈ ಹಾಕುವುದಿಲ್ಲ.
7. ರಾಜಕೀಯ ಜೀವನ:-ಇವರು ತಮ್ಮದೇ ಆದ ರಾಜ್ಯರಹಿತ ರಾಜಕೀಯ ವ್ಯವಸ್ಥೆ (Non-state Political Sytem) ಹೊಂದಿರುತ್ತಾರೆ. ಕುಲದ ಯಜಮಾನಿಕೆಗೆ ಮಾನ್ಯತೆ ನೀಡುವರು.
8. ಒಳಪಂಗಡಗಳ ವೈವಾಹಿಕ ಸಂಬಂಧಗಳನ್ನು ಹೊಂದಿದ್ದು ತಮ್ಮ ಜಾತಿಗಳಲ್ಲೆ ಹಲವಾರು ಕುಲ, ಬೆಡಗುಗಳನ್ನು ಹೊಂದಿರುವರು.



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

**1.5. ಭಾರತದಲ್ಲಿ ಆದಿವಾಸಿಗಳ ಭೌಗೋಳಿಕ ಹರಡಿಕೆ.**

ಆದಿವಾಸಿಗಳು ವಾಸಿಸುವ ಭೂ ಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ವರ್ಗೀಕರಿಸಲಾಗಿದೆ.

**i) ಉತ್ತರ ಮತ್ತು ಈಶಾನ್ಯ ವಲಯ ಆದಿವಾಸಿಗಳು:–** , ಉತ್ತರ, ಕಾಶ್ಮೀರ, ಉತ್ತರ ಪಂಜಾಬ್, ಹಿಮಾಚಲ ಪ್ರದೇಶ, ಅಸ್ಸಾಂ, ಅರುಣಾಚಲ ಪ್ರದೇಶ, ಮೀಜೋರಾಂ, ನಾಗಲ್ಯಾಂಡ್, ಸಿಕ್ಕಿಂ, ಬಂಗಾಳ ಮತ್ತು ಬಿಹಾರ ರಾಜ್ಯಗಳು ಈ ವಲಯಕ್ಕೆ ಸೇರಿವೆ. ಈ ವಲಯದಲ್ಲಿ ವಾಸಿಸುವ ಮುಖ್ಯ ಆದಿವಾಸಿಗಳೆಂದರೇ ಆಕಾ, ಡೆಫ್ಲಾ, ಮಿರಿ, ನಾಗಾ, ಗುರುಂಗ, ಲೆಪ್ಚಾ, ಲಿಂಬು, ಮಿಶ್ಮೀ, ರಾಭಾ, ಬಾಕಮಿ, ಗಾರೋ, ಖಾಸಿ, ಇತ್ಯಾದಿಗಳು ಇವರು ಮಂಗೋಲಿಯ ಬುಡಕಟ್ಟಿಗೆ ಸೇರಿದವರು. ಈಶಾನ್ಯ ವಲಯದ ಆದಿವಾಸಿಗಳು ಬ್ರಿಟೀಷರ ಕಾಲದಿಂದಲೇ ಕ್ರೈಸ್ತ ಮಿಶನರಿಗಳ ಪ್ರಭಾವದಿಂದ ಲಕ್ಷಾಂತರ ಬುಡಕಟ್ಟು ಜನರು ಕ್ರೈಸ್ತ ಮತಕ್ಕೆ ಮತಾಂತರ ಹೋಂದಿರುವರು. ಶ್ರೀ ರಾಮಕೃಷ್ಣ ಮಿಶನ್, ವಿಶ್ವ ಹಿಂದು ಪರಿಷತ್ತ, ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳು ಹಿಂದು ಧರ್ಮ ಪ್ರಚರವನ್ನೂ ಈ ವಲಯದಲ್ಲಿ ನಡೆಸುತ್ತೇವೆ.

**ii). ಮದ್ಯವಲಯದ ಆದಿವಾಸಿಗಳು** (Tribes of Central Zone) ಈ ವಲಯವು ಬಂಗಾಳ, ಬಿಹಾರ, ಉತ್ತರ ಪ್ರದೇಶದ ದಕ್ಷಿಣ ಭಾಗ, ಮಧ್ಯ ಭಾರತ, ಮಧ್ಯಪ್ರದೇಶ ಮತ್ತು ಒರಿಸ್ಸಾ ಮುಂತಾದ ಪ್ರದೇಶಗಳನ್ನು ಆವರಿಸಿವೆ. ಇದು ಅತ್ಯಂತ ದೊಡ್ಡ ವಲಯ (Big Zone) ಆಗಿದೆ. ಇಲ್ಲಿ ನೆಲೆಸಿರುವ ಆದಿವಾಸಿಗಳೆಂದರೆ, ಸಂತಾಲ, ಮುಂಡಾ, ಗೊಂಡ, ಸವರಾ, ಭಿಲ್ಲ, ಬೈಗಾ, ಬಿರೋರ, ಭೂಮಜು, ಗಡಜ, ಬೊಂಡೊ, ಜುವಾಂಗ, ಕಂದ, ಹೋ, ಭೂಯುಯೂ, ಖಾರಿಯ ಇತ್ಯಾದಿ ಆದಿವಾಸಿಗಳು.

**iii). ದಕ್ಷಿಣ ವಲಯದ ಆದಿವಾಸಿಗಳು** (Tribes of Southern Zone) ಈ ವಲಯವು ಹೈದ್ರಾಬಾದ, ಕೊಡಗು, ಕೊಚ್ಚಿನ್, ತ್ರಿವಾಂಕೂರು, ಆಂಧ್ರ, ಮದ್ರಸ್ ಪ್ರದೇಶಗಳನ್ನು ಒಳಗೊಂಡಿರುವುದು.ತೋಡಾ, ಕೆನರಾ, ಕಾಡುಕುರುಬ ಉರಾಲಿ, ಸೋಲಿಗ, ಯರಟ, ಕೋಯ್ಯಾ, ತಿರುವ, ಬಡಗಾ, ಇರುಳಾ, ಶನ್ನಿಕ್ತಾರ್, ಮಾಲ್ಪಡನ್, ಕಾಡರ್, ಚಂಚೂ, ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ವಾಸ ವಾಗಿದ್ದಾರೆ.

**iv). ಅಂಮಾನ್ ಮತ್ತು ನಿಕೋಬಾರ್‌ನ ಆದಿವಾಸಿಗಳು** – ಜರವಾ, ಅಂಡಮಾನಿ, ನಿಕೋಬಾರಿ, ಸೆಂತಿಲ್ ಮುಂತಾದ ಆದಿವಾಸಿಗಳು ಅಂಡಮಾನ್ ಮತ್ತು ನಿಕೋಬಾರ್ ನಡುಗಡ್ಡೆಯಲ್ಲಿ ವಾಸಿಸುವರು.

**1.6. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡ (ST) ಸಮುದಾಯ**

ಕರ್ನಾಟಕವು ಭಾರತ ಒಕ್ಕೂಟದಲ್ಲಿ, ದಕ್ಷಿಣ ಭಾರತದಲ್ಲಿದ್ದು ಐತಿಹಾಸಿಕ, ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಕರ್ನಾಟಕವು ಬುಡಕಟ್ಟು ಜನರ ವಾಸಸ್ಥಾನವಾಗಿದ್ದು 50 ಸಮುದಾಯದವರನ್ನು ಪರಿಶಿಷ್ಟ ಪಂಗಡ (ST) ಎಂದು ಪರಿಗಣಿಸಲಾಗಿದೆ.ಇದರಲ್ಲಿ ಕೊರಗ ಮತ್ತು ಜೇನುಕುರುಬ ಬುಡಕಟ್ಟು ಸಮುದಾಯವನ್ನು ಪ್ರಾಚೀನ ಬುಡಕಟ್ಟು (Primitive Tribes) ಎಂದು ಪರಿಗಣಿಸಲಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯ 7% ರಷ್ಟು ಪರಿಶಿಷ್ಟ ಪಂಗಡ (S T) ಜನಸಂಖ್ಯೆ ಇದೆ.



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

**1.7.ಚಾಮರಾಜನಗರ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯ**

ಚಾಮರಾಜನಗರ ಜಿಲ್ಲೆಯಲ್ಲಿ 5 ತಾಲೂಕುಗಳನ್ನು ಹೊಂದಿದೆ. ಪ್ರತೀ ತಾಲೂಕಿನಲ್ಲಿಯ ಪರಿಶಿಷ್ಟ ಪಂಗಡ (ST) ಸಮುದಾಯದವರಿದ್ದಾರೆ. ಜಿಲ್ಲೆಯ ಜನಸಂಖ್ಯೆಯ 11.78% ರಲ್ಲಿ ಪರಿಶಿಷ್ಟ ಪಂಗಡ ಸಮುದಾಯದವರಿದ್ದಾರೆ. ಜಿಲ್ಲೆಯಲ್ಲಿ 2011ರ ಜನಗಣತಿಯಂತೆ ಒಟ್ಟು 120.219 ಪರಿಶಿಷ್ಟ ಪಂಗಡ ಜನರಿದ್ದಾರೆ. ಕರ್ನಾಟಕದಲ್ಲಿ ಸೋಲಿಗರ ಜನಸಂಖ್ಯೆ 0.79% ಇದೆ. ಒಟ್ಟು 33.819 ರಷ್ಟು ಸೋಲಿಗರು ಕರ್ನಾಟಕದಲ್ಲಿದ್ದಾರೆ. ಇದರಲ್ಲಿ ಅತೀ ಹೆಚ್ಚು ಸೋಲಿಗರು ಚಾಮರಾಜನಗರ ಜಿಲ್ಲೆಯಲ್ಲಿದ್ದಾರೆ. ಅವರಲ್ಲಿ ಸೋಲಿಗರು ಒಟ್ಟು 18.163 ಜನರಿದ್ದಾರೆ. ಈ ಜಿಲ್ಲೆಯಲ್ಲಿ ಕಾಡುಕುರುಬರು ಸುಮಾರು 340, ಮೇದರು 835, ಹಕ್ಕಿ ಪಿಕ್ಕಿ 60 ಜನರು, ಜೇನುಕುರುಬರು 832 ಇದ್ದಾರೆ. (ಪುಸ್ತಕ ಸೂಕ್ಷ್ಮ ಬುಡಕಟ್ಟುಗಳು).

**1.8. ಬುಡಕಟ್ಟು ನ್ಯಾಯಪರತೆ**

ಪ್ರತಿಯೊಂದು ಬುಡಕಟ್ಟು ಸಮುದಾಯವು ತಮ್ಮದೇ ಆದ ಸಂಸ್ಕೃತಿ ಹೊಂದಿರುವುದಷ್ಟೆ ಅಲ್ಲ. ತಮ್ಮದೇ ಆದ ಸಾಮಾಜಿಕ ನಿಯಂತ್ರಣ ಹೊಂದಿರುವರು. ಈ ಸಾಮಾಜಿಕ ನಿಯಂತ್ರಣವು ಸಾಂಪ್ರದಾಯಕ ಪಂಚಾಯ್ತಿ ವ್ಯವಸ್ಥೆಯು ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಸಾಮಾಜಿಕ, ನೈತಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ನಿಯಂತ್ರಣವನ್ನು ಸಾಧಿಸುವುದಾಗಿದೆ.

**ಸಾಂಪ್ರದಾಯಕ ಪಂಚಾಯ್ತಿ ವ್ಯವಸ್ಥೆಯ ಬಾಧ್ಯತೆಗಳು**

1. ಬುಡಕಟ್ಟು ಪರಂಪರೆ, ಸಂಪ್ರದಾಯ, ರೀತಿ ನೀತಿಗಳು, ವೈವಾಹಿಕ ಸಂಬಂಧಗಳು ವಿವಾಹ ವಿಚ್ಛೇದನಾ ಕೌಟುಂಬಿಕ ಕಲಹಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ. ಆತಂರಿಕ ವ್ಯಕ್ತಿಗತ ಸಂಬಂಧಗಳ ಬಲವರ್ಧನೆಗಳನ್ನು ನಿರ್ವಹಿಸುತ್ತದೆ.
2. ಕುಲ ಪಂಚಾಯ್ತಿ ವ್ಯವಸ್ಥೆಯು ಬುಡಕಟ್ಟು ಸಮುದಾಯದ ಆರ್ಥಿಕ ವ್ಯವಸ್ಥೆಗೆ ಪೂರಕವಾದ ಭೂ ಸಾಗುವಳಿ, ಕೃಷಿ ಚಟುವಟಿಕೆಗಳು ಮತ್ತು ಸಾಮಾನ್ಯ ಸಮುದಾಯದ ಆಸ್ತಿ ರಕ್ಷಣೆಯಲ್ಲಿ ಪಾತ್ರವಹಿಸುತ್ತದೆ.
3. ಧಾರ್ಮಿಕ ಆಚರಣೆಗಳು ಹಾಗೂ ಹಬ್ಬ ಹರಿದಿನಗಳು ನಿರ್ವಹಿಸುತ್ತದೆ.
4. ಸಮುದಾಯದ ರಾಜಕೀಯ ಸಂರಕ್ಷಣೆ ಸಮುದಾಯದ ಮುಖಂಡರ ಪಾತ್ರ ಬಾಧ್ಯತೆಗಳು, ಸಾಂಪ್ರದಾಯಿಕ ನ್ಯಾಯಪದ್ದತಿಯ ಆಡಳಿತ ನಿರ್ಧರಿಸುವಿಕೆ, ವಂಶಪಾರಂಪರ್ಯ ಹಕ್ಕುಗಳ ರಕ್ಷಣೆಯಲ್ಲಿ ಪಾತ್ರವಹಿಸುತ್ತದೆ.
5. ಸಾಂಪ್ರದಾಯಿಕ ಸಾಂಸ್ಕೃತಿಕ ಪರಂಪರೆ ರಕ್ಷಣೆ ಜೊತೆಗೆ ತಮ್ಮ ಸಂಪ್ರದಾಯಿಕ ನೃತ್ಯ, ಸಾಂಪ್ರದಾಯಿಕ ಕೌಶಲ್ಯ ಮತ್ತು ಜ್ಞಾನ ಮುಂತಾದವನ್ನು ಯತಾವತ್ತಾಗಿ ಪಾಲಿಸುವಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಆದ್ದರಿಂದ ಬುಡಕಟ್ಟು ಜನರು ತಮ್ಮ ಸಾಂಪ್ರದಾಯಿಕ ಪಂಚಾಯ್ತಿ ವ್ಯವಸ್ಥೆ ಮೇಲೆ ನಿಷ್ಠೆ ಹೊಂದಿರುತ್ತಾರೆ. ಸಾಂಪ್ರದಾಯಿಕ ನಿಯಮಗಳು ನೈತಿಕತೆ ಹಾಗೂ ಮತ್ತು ಕಾನೂನಾತ್ಮಕ ನಿಯಮಗಳು ಬುಡಕಟ್ಟು ಜನರ ಪ್ರದೇಶದ ಅಭಿವೃದ್ಧಿ ಗುರಿ ಸಾಧನೆಗೆ ಪೂರಕವಾಗಿದೆ.



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.

## 1.9. ಕರ್ನಾಟಕದಲ್ಲಿ ಬುಡಕಟ್ಟು ವೈವಿಧ್ಯತೆ (Tribal diversity)

ಕರ್ನಾಟಕದಲ್ಲಿರುವ ಬುಡಕಟ್ಟು ಸಮುದಾಯವನ್ನು ಅವರ ಕುಲಕಸುಬು ಮತ್ತು ಅವರ ಪೂರ್ವ ವೃತ್ತಾಂತರದ ಆಧಾರದಲ್ಲಿ ಅಲೆಮಾರಿ ಬುಡಕಟ್ಟು, ಅರೆಅಲೆಮಾರಿ ಬುಡಕಟ್ಟುಗಳು, ಭೇಟೆ ಮತ್ತು ಅಹಾರ ಸಂಗ್ರಹ ಬುಡಕಟ್ಟುಗ್ಗಳು, ಪಶುಪಾಲನಾ ಬುಡಕಟ್ಟುಗ್ಗಳು, ಕೃಷಿಕ ಬುಡಕಟ್ಟು ಮತ್ತು ಅಪರಾಧಿಕ ಬುಡಕಟ್ಟುಗಳೆಂದು ವಿಂಗಡಿಸಬಹುದು. ಬ್ರಿಟಿಷರು 1871 ರಲ್ಲಿ ಅಪರಾಧಿಕ ಬುಡಕಟ್ಟು ಅಧಿನಿಯಮ. (criminal tribes Act 1871) ಜಾರಿಗೊಳಿಸಿತು. ಈ ಕಾಯ್ದೆ ಜಾರಿಯಿಂದ, ಈ ಅಧಿನಿಯಮದಡಿ ಗುರುತಿಸಲ್ಪಟ್ಟ ಬುಡಕಟ್ಟು ಸಮುದಾಯವು ಹುಟ್ಟಿನಿಂದಲೇ ಅಪರಾಧಿ ಸ್ಥಾನ ಪಡೆಯಬೇಕಿತ್ತು. ಈ ಅಧಿನಿಯಮವನ್ನು 1897, 1911, ಹಾಗೂ 1923, 1924 ಹಾಗೂ 1947 ರಲ್ಲಿ ತಿದ್ದುಪಡಿ ಮಾಡಲಾಯಿತು. ಆದರೇ ಸ್ವತಂತ್ರ ಭಾರತದಲ್ಲಿ ಅಪರಾಧ ಬುಟಕಟ್ಟು (criminal tribes) ಎಂಬ ನಾಮಾಂಕಿತದಲ್ಲಿ ಯಾವುದೇ ಬುಡಕಟ್ಟು ಸಮುದಾಯವನ್ನು ಗುರ್ತಿಸಲಾಗುತ್ತಿಲ್ಲ.

## 1.10. ಕರ್ನಾಟಕದಲ್ಲಿ ಬುಡಕಟ್ಟು ಸಾಂಪ್ರದಾಯಿಕ ನ್ಯಾಯಪದ್ದತಿ

ಕರ್ನಾಟಕದಲ್ಲಿ ಗುರ್ತಿಸಿರುವ 50 ಬುಡಕಟ್ಟು ಸಮುದಾಯದವರಲ್ಲಿ ಪ್ರತಿ ಬುಡಕಟ್ಟು ಜನರ ಸಂಸ್ಕೃತಿ ಆಚಾರ ವಿಚಾರ, ರೂಢಿ ಸಂಪ್ರದಾಯ, ಸಾಮಾಜಿಕ ವ್ಯವಸ್ಥೆ ಭಿನ್ನವಾಗಿದೆ. ನ್ಯಾಯ ನಿರ್ಣಯ ಪದ್ದತಿಗಳೆಲ್ಲವೂ ಒಂದು ಸಮುದಾಯಕ್ಕಿಂತ ಮತ್ತೊಂದು ಸಮುದಾಯದಲ್ಲಿ ವಿಭಿನ್ನತೆಯನ್ನು ಗುರ್ತಿಸಬಹುದಾಗಿದೆ. ಹಾಗೂ ಒಂದೇ ಸಮುದಾಯದ ಬುಡಕಟ್ಟಿನ ಜನರಲ್ಲಿ ಪ್ರಾದೇಶಿಕವಾಗಿಯೂ ಕೆಲವಾರು ವಿಚಾರಗಳಲ್ಲಿ ಭಿನ್ನತೆಗಳನ್ನು ಕಾಣಬಹುದು. ಉತ್ತರ ಕರ್ನಾಟಕದಲ್ಲಿರುವ ಬುಡ'ಕಟ್ಟು ಜನರ ಸಂಪ್ರದಾಯಕ್ಕೂ ದಕ್ಷಿಣ ಕರ್ನಾಟಕ ಭಾಗದಲ್ಲಿರುವ ಒಂದೇ ಬುಡಕಟ್ಟು ಜನರ ಆಚಾರ ವಿಚಾರಗಳಲ್ಲಿ ಹಲವು ಭಿನ್ನತೆಗಳನ್ನು ಗಮನಿಸಬಹುದು.

## 1.11.ಉಪಸಂಹಾರ (conclusion):-

ಬುಡಕಟ್ಟು ಜನರು ತಮ್ಮಲ್ಲಿ ಉದ್ಭವಿಸುವ ವಿವಾದಗಳನ್ನು ತಮ್ಮ ಕುಲ ಪಂಚಾಯಿತಿ ಮೂಲಕ ಬಗೆಹರಿಸಿಕೊಳ್ಳುವ ವ್ಯವಸ್ಥೆ ಇದೆ. ಸಿವಿಲ್ ಮತ್ತು ಕ್ರಿಮಿನಲ್ ಸ್ವರೂಪದ ವ್ಯಾಜ್ಯ ಪ್ರಕರಣವನ್ನು ತಮ್ಮದೇ ಶೈಲಿಯಲ್ಲಿ ಅತೀ ಶೀಘ್ರವಾಗಿ ಕುಲ ಪಂಚಾಯಿತಿ ಮೂಲಕ ಬಗೆಹರಿಸುವ ಪದ್ದತಿಯನ್ನು ರೂಡಿಸಿಕೊಂಡಿವೆ. ನ್ಯಾಯಾಲಯದ ಮೊರೆಹೋಗದೆ ತಮ್ಮಲ್ಲೇ ಪ್ರಕರಣಗಳನ್ನು ಇತ್ಯರ್ಥಗೊಳಿವಿಸುವರು.ಆದ್ದರಿಂದ ಪ್ರಸ್ತುತ ಈ ಸಂಶೋಧನೆಗೆ ಒಳಪಟ್ಟ ಪ್ರದೇಶದಲ್ಲಿ ವಾಸಿಸುವ ಕರ್ನಾಟಕದ ಬುಡಕಟ್ಟು ಸಮುದಾಯವು ಕೂಡ ಕುಲ ಪಂಚಾಯಿತಿ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದಿರುತ್ತವೆ. ಆದ್ದರಿಂದ ಈ ಕುಲ ಪಂಚಾಯಿತಿ ವ್ಯವಸ್ಥೆಯ ರೀತಿ ನೀತಿಗಳು ಹಾಗು ಬುಡಕಟ್ಟು ಜನರ ಸಾಮಾಜಿಕ ನಿಯಂತ್ರಣಕ್ಕೆ ಇದರ ಮಹತ್ವ ಅರಿಯಲು ಈ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಈ ಸಂಶೋಧನೆಗೆ ಸಂಶೋಧನಾ ವಿಧಾನವನ್ನು ಅಧ್ಯಾಯ 2 ರಲ್ಲಿ ಚರ್ಚಿಸಿಲಾಗಿದೆ.



IQAC COORDINATOR
Karnataka State Law University
Hubballi-25.

Registrar
Karnataka State Law University
Navanagar, Hubballi-580 025.